ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003**

# ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-4/2015-16 ದಿನಾಂಕ: 28.03.2016 ಮತ್ತು ಬಿ9-ನೇಮಕಾತಿ-ವಿವ-3/2015-16 ದಿನಾಂಕ: 23.03.2016**

## 460 ಉಪ ವಲಯ ಅರಣ್ಯಾಧಿಕಾರಿ ಹಾಗೂ 555 ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ

* * * * *

ಕರ್ನಾಟಕ ಅರಣ್ಯ ಇಲಾಖೆಯಲ್ಲಿ 460 ಉಪ ವಲಯ ಅರಣ್ಯಾಧಿಕಾರಿ ಹಾಗೂ 555 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ದಿನಾಂಕ: 20.11.2016 ರಂದು ಲಿಖಿತ ಪರೀಕ್ಷೆ ನಡೆಸಲಾಗಿದೆ.

ದಿನಾಂಕ: 20.11.2016 ರಂದು ನಡೆದ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳನ್ನು ಇಲಾಖಾ ವೆಬ್‌ಸೈಟ್ https://kfdrecruitment.in ನಲ್ಲಿ ಪ್ರಕಟಿಸಲಾಗಿದೆ. ಈ ಬಗ್ಗೆ ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ದಿನಾಂಕ: 09.12.2016 ರ ಸಂಜೆ 5 ಗಂಟೆಯೊಳಗೆ ಈ ಕಛೇರಿಯ ಇ ಮೇಲ್ ಐಡಿ: drfofgexam@gmail.com ಗೆ ಸಲ್ಲಿಸಬಹುದಾಗಿದೆ.

ಮುಂದುವರೆದು,

1. ಅಭ್ಯರ್ಥಿಯು ಅತೀ ಪ್ರಾಮುಖ್ಯವಾಗಿ ಅಭ್ಯರ್ಥಿಯ ನೋಂದಣಿ ಸಂಖ್ಯೆಯನ್ನು ಬರೆಯುವುದು ಅಭ್ಯರ್ಥಿಯ ಗುರುತರವಾದ ಜವಾಬ್ದಾರಿಯಾಗಿರುತ್ತದೆ. ಅಭ್ಯರ್ಥಿ ಇದನ್ನು ಉತ್ತರ ಪತ್ರಿಕೆಯಲ್ಲಿ ಬರೆಯದೇ ಇರುವುದರಿಂದ ಅಭ್ಯರ್ಥಿಯ ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡಿ, ನಿಗದಿತ ಅಭ್ಯರ್ಥಿಗೆ ಅಂಕ ನೀಡಲು ಸಾಧ್ಯವಾಗುವುದಿಲ್ಲ. ಇದಲ್ಲದೇ, ಅತೀ ಪ್ರಾಮುಖ್ಯವಾಗಿ ಪ್ರಶ್ನೆ ಪತ್ರಿಕೆಯ ಬಹುಮುಖ್ಯ ಸೂಚನೆಗಳ ಕ್ರಮ ಸಂಖ್ಯೆ (3) ರಲ್ಲಿ ಈ ಬಗ್ಗೆ ಸೂಚನೆಯನ್ನೂ ಸಹ ನೀಡಲಾಗಿರುತ್ತದೆ ಮತ್ತು ಉತ್ತರ ಪತ್ರಿಕೆಯ ನಿಗಧಿತ ಅಂಕಣದಲ್ಲಿ ಅಭ್ಯರ್ಥಿಯಿಂದ ಈ ಕುರಿತಾದ ದೃಢೀಕರಣವನ್ನು ಸಹ ಪಡೆಯಲಾಗಿರುತ್ತದೆ. ಹೀಗಾಗಿ, ನೋಂದಣಿ ಸಂಖ್ಯೆಯನ್ನು ನಮೂದಿಸದೇ ಇರುವ ಅಭ್ಯರ್ಥಿಗೆ ಅಂಕ ನೀಡಲು ಸಾಧ್ಯವಾಗುವುದಿಲ್ಲ ಎಂಬುದನ್ನು ಈ ಮೂಲಕ ತಿಳಿಯಪಡಿಸಿದೆ.

2. ಉತ್ತರ ಪತ್ರಿಕೆಯಲ್ಲಿ ಅಭ್ಯರ್ಥಿಯು ತನಗೆ ನೀಡಲಾದ ಪ್ರಶ್ನೆ ಪತ್ರಿಕೆಯ Version Code ನಮೂದಿಸದೇ ಇರುವುದರಿಂದ ಹಾಗೂ ಒಂದಕ್ಕಿಂತ ಹೆಚ್ಚು Version Code ನ ಬಗ್ಗೆ ಮಾಹಿತಿ ನಮೂದಿಸಿರುವುದರಿಂದ ಯಾವ ಅಭ್ಯರ್ಥಿಗೆ ಯಾವ Version Code ನ ಪ್ರಶ್ನೆ ಪತ್ರಿಕೆ ನೀಡಲಾಗಿದೆ ಎಂಬುದನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಇಂತಹ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಿ, ಅಂಕಗಳನ್ನು ನೀಡಲು ಸಾಧ್ಯವಾಗುವುದಿಲ್ಲ ಮತ್ತು Version Code ಬರೆಯುವುದು ಅಭ್ಯರ್ಥಿಯ ಗುರುತರವಾದ ಜವಾಬ್ದಾರಿಯಾಗಿರುತ್ತದೆ ಹಾಗೂ ಉತ್ತರ ಪತ್ರಿಕೆಯ ನಿಗಧಿತ ಅಂಕಣದಲ್ಲಿ ಅಭ್ಯರ್ಥಿಯಿಂದ ಈ ಕುರಿತಾದ ದೃಢೀಕರಣವನ್ನು ಸಹ ಪಡೆಯಲಾಗಿರುತ್ತದೆ. ಹೀಗಾಗಿ, ಇಂತಹ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳಿಗೆ ಅಂಕ ನೀಡಲು ಸಾಧ್ಯವಾಗುವುದಿಲ್ಲ ಎಂಬುದನ್ನು ಈ ಮೂಲಕ ತಿಳಿಯಪಡಿಸಿದೆ.

ಇಂತಹ ಮೇಲ್ಕಂಡ ನ್ಯೂನ್ಯತೆಗಳು ಇರುವ ಅಭ್ಯರ್ಥಿಗಳಿಗೆ ಈ ಮಾಹಿತಿಯನ್ನು ತಿಳಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ಬೆಂಗಳೂರು,
ದಿನಾಂಕ: 05-12-2016